ಪ್ರಬಂಧ

ಅಧಿಕೃತ ನ್ಯಾಯಾಲಯಗಳ ಹೊರಗೆ ಸಕ್ರಿಯವಾಗಿರುವ ಆಧುನಿಕ ಪಂಚಾಯ್ತಿ ಕಟ್ಟೆಗಳಾದ ಸುದ್ದಿವಾಹಿನಿ, ಸಾಮಾಜಿಕ ಮಾಧ್ಯಮಗಳಲ್ಲಿ, 'ನಿವೃತ್ತ ನ್ಯಾಯಮೂರ್ತಿಗಳಿಗೆ 'ಬಿಡುಗಡೆ' ಮಾಡುವ ಅಧಿಕಾರ ಇರುತ್ತದೆಯೇ...?' ಎಂಬ ಉತ್ತರವಿಲ್ಲದ ಕಾನೂನಾತ್ಮಕ ಪ್ರಶ್ನೆ ಎತ್ತಿಕೊಂಡು ಅಗಿಯತೊಡಗಿದರೆ ಖರ್ಚಾಗುವುದು ನಮ್ಮ ಮೊಬೈಲ್ ಡೇಟಾ ಮತ್ತು ವಿದ್ಯುತ್ ಮಾತ್ರ. ಹಾಗಾಗಿ ಆ ಚರ್ಚೆಯಿಂದ ಇಲ್ಲಿಯೇ 'ಬಿಡುಗಡೆ' ಪಡೆದು... ರೈಟ್, ಮುಂದಕ್ಕೆ ಹೋಗೋಣ...!

ಯಾವುದೇ ಜಾತಿ, ಪಕ್ಷ, ಸಿದ್ಧಾಂತದ ಹಂಗಿಲ್ಲದೇ ಪುಸ್ತಕಲೋಕದ ಆಯಕಟ್ಟಿನ ಸ್ಥಾನದಲ್ಲಿ ವಿರಾಜಮಾನವಾಗಿರುವ 'ಬಿಡುಗಡೆ' ಪದವನ್ನು



ಲೋಕಾರ್ಪಣೆ, ಜನಾರ್ಪಣೆ ಮುಂತಾದ ಸಕಲೆಂಟು ಪ್ರತಿಸ್ಪರ್ಧಿಗಳು ಮುಗಿಬಿದ್ದರೂ ಕದಲಿಸಲು ಸಾಧ್ಯವಾಗಿಲ್ಲ. ಪುಸ್ತಕದ ಬಿಡುಗಡೆ ಎಂದರೆ ಕೆಲವೇ ಸಂಬಂಧಿಕರ, ಗೆಳೆಯರ ಸಮ್ಮುಖದಲ್ಲಿ ನಡೆಯುವ ಸಾಮಾನ್ಯ ಅಪರಾಧಿಯ ಜೈಲುವಾಸದ ಬಿಡುಗಡೆಯಷ್ಟು ನಾನ್ ಈವೆಂಟ್ ಅಲ್ಲ. ಹಾಗೆಯೇ ಜಾಮೀನಿನ ಮೇಲೆ ಬಿಡುಗಡೆಯಾದರೂ ಅದ್ಧೂರಿಯಾಗಿ ಹೊರಬರುವ ರಾಜಕೀಯ ನಾಯಕನ ಮೆಗಾ ಈವೆಂಟ್ ಕೂಡ ಅಲ್ಲ. ಬಿಡುಗಡೆಗೆ ಸಾಕ್ಷಿಯಾಗಿ ಸಭಾಂಗಣ ತುಂಬುವಷ್ಟು ಜನ ಇರಬೇಕು, ಆದರೆ ಉಪಾಹಾರ ಖಾಲಿಯಾಗುವಷ್ಟು ಜಂಗುಳಿ ಇರಬಾರದು ಎಂಬುದು ಆಯೋಜಕರ ಬಯಕೆಯಾಗಿರುತ್ತದೆ.

ಸಾಮಾನ್ಯವಾಗಿ ಖರ್ಚುವೆಚ್ಚಗಳ ಭರಿಸುವಿಕೆ ದೃಷ್ಟಿಯಿಂದ ಪ್ರಕಾಶಕರೇ ಆಯೋಜಕರಾಗಿರುತ್ತಾರೆ. ಅತಿಥಿಗಳು, ಸಭಾಂಗಣ ಹಾಗೂ ದಿನಾಂಕ ನಿರ್ಧರಿಸುವುದರಲ್ಲಿ ಲೇಖಕರ ಭಾಗೀದಾರಿಕೆ ಮತ್ತು ಸಂಪರ್ಕಗಳು ಹೆಚ್ಚಿನ ಪ್ರಯೋಜನಕ್ಕೆ ಬರುತ್ತವೆ. ಬಿಡುಗಡೆಗೆ ಜನರನ್ನು ಸೇರಿಸುವ ಹೊಣೆ ಇಬ್ಬರ ಹೆಗಲ ಮೇಲಿದ್ದರೂ ಲೇಖಕನಿಗದು ತನ್ನ ಜನಪ್ರಿಯತೆ ಒರೆಗೆ ಹಚ್ಚುವ ಸಂದರ್ಭ. ಹಾಗಾಗಿ ಆತ ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದೆ. ಇತ್ತೀಚೆಗೆ ಪುಸ್ತಕದ ಬರವಣಿಗೆ, ಅಚ್ಚುಕಟ್ಟಾದ ಪ್ರಕಟಣೆ, ಹಣ ಹೂಡಿಕೆ ಯಾರಾದರೂ ಮಾಡಬಹುದು; ಬಿಡುಗಡೆಗೆ ಸಹೃದಯರನ್ನು ಸೇರಿಸುವ ಹೃದಯವಿದ್ರಾವಕ ಕಾರ್ಯವಿದೆಯಲ್ಲ... ಅದು ಎಲ್ಲರಿಂದಲೂ ಸಾಧ್ಯವಿಲ್ಲ ಎಂಬಂತಾಗಿದೆ. ಓದುಗದೇವರ ಓಲೈಕೆಗಾಗಿ ಕೃತಿಕಾರರು ಹೊರುವ ಹರಕೆ, ಹಾಕುವ ತಿಪ್ಪರಲಾಗ ಅನುಕಂಪ ಹುಟ್ಟಿಸುವಂತಿರುತ್ತದೆ. ಪುಸ್ತಕದ ರಚನೆಗಿಂತ ಬಿಡುಗಡೆಯ ಸಿದ್ಧತೆಯೇ ಹೆಚ್ಚು ಅನುಭವ, ಪ್ರತಿಭೆ, ಸೃಜನಶೀಲತೆ ಬೇಡುವ ಕ್ರಿಯೆಯಾಗಿ ತೋರಿದರೆ ಅಚ್ಚರಿಯೇನಿಲ್ಲ.

ಲೇಖಕರು ಮುತುವರ್ಜಿಯಿಂದ ರೂಪಿಸಿದ ಆಕರ್ಷಕ ಆಹ್ವಾನ ಪತ್ರಿಕೆಯ ಇಮೇಜನ್ನು ಬಿಡುಗಡೆಗೆ ತಿಂಗಳು ಮೊದಲಿನಿಂದಲೇ ಸಾಮಾಜಿಕ ಮಾಧ್ಯಮದ ಗುಂಪುಗಳಲ್ಲಿ ದಿನಂಪ್ರತಿ ಸುರಿಯುತ್ತಾರೆ. ಪುಸ್ತಕದ ಬೆನ್ನುಡಿ, ಮುನ್ನುಡಿ, ಹಿನ್ನುಡಿಗಳಿಂದ ಆಯ್ದ ಹೊಗಳಿಕೆಯ ಸಾಲುಗಳನ್ನು ಉಲ್ಲೇಖಿಸುತ್ತಾ ಸಹೃದಯದೊಳಗೆ ನುಸುಳುವ ಪ್ರಯತ್ನ ನಡೆಯುತ್ತದೆ. ಬಹುಪಾಲು ಸಾಮಾಜಿಕ ಮಾಧ್ಯಮ ಗುಂಪುಗಳಲ್ಲಿ ಇರುವವರು ಗಾಂಧೀವಾದಿಗಳು; ತಮಗೆ ಕಾಣಿಸುವ ಸಂದೇಶ, ಚಿತ್ರ, ವೀಡಿಯೊ ಯಾವುದನ್ನೂ ಸಂಗ್ರಹಿಸಿ ಇಟ್ಟುಕೊಳ್ಳದೆ, ಓದದೆಯೂ, ತಕ್ಷಣ ಇನ್ನೊಬ್ಬರಿಗೆ ಹಂಚುವ ನಿಸ್ವಾರ್ಥ ಅವರದು. ಅವರು ಬಸವತತ್ವ ಅನುಯಾಯಿಗಳೂ ಹೌದು: ಫಾರ್ವರ್ಡ್ ಮಾಡುವುದು ಅವರ ಪ್ರತಿನಿತ್ಯದ ಕಾಯಕ ಮತ್ತು ದಾಸೋಹದ ಪರಿ. ಹಾಗಾಗಿ ಲೇಖಕರು ಕಳುಹಿಸುವ